# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

**(ಕರ್ನಾಟಕ ಸರ್ಕಾರದ ಉದ್ದಿಮೆ)**

ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ
ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 044.

**RGRHCL**

| | | |
|---|---|---|
| 1. | ಯೋಜನೆಯ ಹೆಸರು: | **ಗ್ರಾಮೀಣ ಅಂಬೇಡ್ಕರ್ ಯೋಜನೆ**<br>ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ/ ಪಂಗಡಗಳಿಗೆ ಸೇರಿದ ಫಲಾನುಭವಿಗಳಿಗೆ ವಸತಿ ಕಲ್ಪಿಸುವ ಯೋಜನೆ |
| 2. | ಪ್ರತಿ ಮನೆಗೆ ಆರ್ಥಿಕ ಸಹಾಯ: | ರೂ. 50,000/- (ಸಂಪೂರ್ಣ ಸಹಾಯಧನ ಆಗಿರುತ್ತದೆ) |
| 3. | **ಆರ್ಥಿಕ ಸಹಾಯ ಒದಗಿಸುವ ವಿಧಾನಗಳು**: (ವಿ.ಸೂ.: ಸಾಲ ಅಥವಾ ಸಹಾಯಧನದ ಮೊತ್ತದ ಮಿತಿಯನ್ನು ಸರ್ಕಾರವು ಆಗಿಂದಾಗ್ಗೆ ನಿಗದಿಪಡಿಸಬಹುದಾದ ಮಾರ್ಪಾಡುಗಳಿಗೆ ಒಳಪಟ್ಟಿರುತ್ತದೆ) | |
| | ಅ) ಸಾಲ: | ಇರುವುದಿಲ್ಲ. |
| | ಆ) ಸಹಾಯಧನ: | ರೂ. 50,000/-ಮಾತ್ರ ಸಂಪೂರ್ಣ ಸಹಾಯಧನ ಆಗಿರುತ್ತದೆ. |
| | ಇ)ಫಲಾನುಭವಿಯ ಸ್ವಸಹಾಯ ವಂತಿಗೆ: | ಈ ಯೋಜನೆಯಡಿಯಲ್ಲಿ ಒದಗಿಸಲಾಗುವ ಆರ್ಥಿಕ ಸಹಾಯದ ಜೊತೆಗೆ, ಫಲಾನುಭವಿಯು ತನ್ನ ಸಾಮರ್ಥ್ಯ ಹಾಗೂ ವಸತಿಯ ಅವಶ್ಯಕತೆಗೆ ಅನುಸಾರವಾಗಿ ಸಾಧ್ಯವಾದಷ್ಟು ಸ್ವಂತ ಉಳಿತಾಯ ಹೂಡಿಕೆ ಮಾಡಿ ಹೆಚ್ಚಿನ ಹಾಗೂ ಉತ್ತಮ ಸೌಲಭ್ಯಗಳನ್ನು ಹೊಂದಬಹುದು. |
| 4. | ಬಡ್ಡಿಯ ದರ: | ಸಾಲ ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| 5. | ಮರುಪಾವತಿಯ ಹಣ ಮತ್ತು ಅವಧಿ: | ಸಾಲ ಇಲ್ಲದೇ ಇರುವುದರಿಂದ ಅನ್ವಯಿಸುವುದಿಲ್ಲ. |
| 6. | ಅರ್ಹತೆ ಮತ್ತು ಷರತ್ತುಗಳು: | 1. ಫಲಾನುಭವಿಯು ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು, ಯಾವುದೇ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಗ್ರಾಮ ಸಭಾದ ನಿವೇಶನ ರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು.<br>2. ಫಲಾನುಭವಿಯು ಪರಿಶಿಷ್ಟ ಜಾತಿ/ ಪಂಗಡಕ್ಕೆ ಸೇರಿರಬೇಕು.<br>3. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು (ಪ್ರಸ್ತುತ ಮಿತಿಯು ವಾರ್ಷಿಕ ರೂ. 32,000/- ಆಗಿರುತ್ತದೆ.)<br>4. ಮನೆ/ನಿವೇಶನ ಹಕ್ಕುಪತ್ರವನ್ನು ಹೆಂಡತಿ ಹೆಸರಿನಲ್ಲಿ ವಿತರಿಸಬೇಕು. ವಿಧುರರು ಆಯ್ಕೆಯಾಗಿದ್ದಲ್ಲಿ ಅವರ ಹೆಸರಿನಲ್ಲಿ ಹಕ್ಕುಪತ್ರ ವಿತರಿಸಬಹುದು.<br>5. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>6. **<u>ಫಲಾನುಭವಿಗಳ ಆಯ್ಕೆ</u>** : ಈಗಾಗಲೇ ಸಮೀಕ್ಷೆ ಮೂಲಕ ನಿವೇಶನ ರಹಿತರ ಪಟ್ಟಿ ಹಾಗೂ ಸ್ವಂತ ನಿವೇಶನವನ್ನು ಹೊಂದಿದ್ದು ಮನೆ ಇಲ್ಲದವರ ಪಟ್ಟಿಯನ್ನು ಸಮೀಕ್ಷೆ ಮೂಲಕ 2003 ರಲ್ಲಿ ತಯಾರಿಸಲಾಗಿದ್ದು, ಆ ಪಟ್ಟಿಯಲ್ಲಿ ಇನ್ನೂ ಸೇರ್ಪಡೆ ಆಗದೇ ಇರುವ ನೈಜ ಮತ್ತು ಅರ್ಹ ಅಭ್ಯರ್ಥಿಗಳನ್ನು ಸೇರಿಸಿ ಮತ್ತು ಅನರ್ಹ ಅಭ್ಯರ್ಥಿಗಳಿದ್ದರೆ ಅಂತಹವರನ್ನು ಪಟ್ಟಿಯಿಂದ ತೆಗೆದು ಹಾಕಿ ಆಗಿಂದಾಗ್ಗೆ ಪರಿಷ್ಕೃತ ಪಟ್ಟಿಯನ್ನು ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳ ಮೂಲಕ ತಯಾರಿಸಲಾಗುತ್ತಿರುತ್ತದೆ. ಇಂತಹ ಪರಿಷ್ಕೃತ ಪಟ್ಟಿಯಲ್ಲಿ ಇರುವ ಫಲಾನುಭವಿಗಳನ್ನು ಮಾತ್ರ ನಿಯಮಾನುಸಾರ ಕರೆಯಲಾದ ಗ್ರಾಮಸಭೆಗಳಲ್ಲಿ ಆಯ್ಕೆ ಮಾಡಬೇಕಾಗುತ್ತದೆ.<br>7. **<u>ಮನೆಗಳ ವಿಸ್ತೀರ್ಣ ಮತ್ತು ವಿನ್ಯಾಸ</u>** : ಕನಿಷ್ಟ 20 ಚ.ಮೀ. ನೆಲಗಟ್ಟು ವಿಸ್ತೀರ್ಣ ಇರುವಂತೆ ಮನೆ ನಿರ್ಮಿಸಬೇಕು. ಇದಕ್ಕಾಗಿ ಯಾವುದೇ ನಕ್ಷೆ ಅಥವಾ ವಿನ್ಯಾಸ ನಿಗದಿಪಡಿಸಿರುವುದಿಲ್ಲ. ಆದರೆ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಮಣ್ಣು, ಹವಾಗುಣ, ಪರಿಸ್ಥಿತಿ, ಸ್ಥಳೀಯವಾಗಿ ಲಭ್ಯವಿರುವ ಸಾಮಾಗ್ರಿಗಳ ಬಳಕೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಪ್ರದೇಶವಾರು ಮತ್ತು ಬದಲಿ ವಿನ್ಯಾಸಗಳನ್ನು ಅನುಸರಿಸಬಹುದು. ಮನೆ ನಿರ್ಮಾಣದ ಪ್ರತಿ ಹಂತದಲ್ಲಿಯೂ ಫಲಾನುಭವಿಯು ಸಕ್ರಿಯವಾಗಿ ಪಾಲ್ಗೊಂಡು ಒಳ್ಳೆಯ ಗುಣಮಟ್ಟದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಹೊಂದಬಹುದು.<br>8. ಇಂದಿರಾ ಆವಾಸ್ ಯೋಜನೆಯಲ್ಲಿ ಇರುವಂತೆ ಸುಧಾರಿತ ಒಲೆ (ಚೂಲ್ಹಾ) ನೈರ್ಮಲೀಕರಣ, ನಕ್ಷೆ ಸುಧಾರಿತ ಕಟ್ಟಡ ಉಪಕರಣಗಳ ಬಳಕೆ ಇತ್ಯಾದಿ ಅಂಶಗಳು ಹೆಚ್ಚುವರಿಯಾಗಿ ಯತಾವತ್ ಈ ಯೋಜನೆಗೂ ಸಹಾ ಅನ್ವಯಿಸಬಹುದಾಗಿದೆ. |

| | | |
|---|---|---|
| | | 9. 15 ವರ್ಷಗಳು ಮುಗಿಯುವವರೆಗೆ ಫಲಾನುಭವಿಗೆ ಕೇವಲ ಮನೆಯ ಸ್ವಾಧೀನವನ್ನು ಉಪಯೋಗಕ್ಕೆ ಮಾತ್ರ ಕೊಡಲಾಗುವುದು ಹಾಗೂ 15 ವರ್ಷಗಳ ನಂತರ ಸ್ವತ್ತಿನ ಒಡೆತನವನ್ನು ವರ್ಗಾವಣೆ ಮಾಡಲಾಗುವುದು.<br>ಒಟ್ಟಾರೆ ಆಗಿಂದ್ದಾಗೆ ಸರ್ಕಾರವು ಗ್ರಾಮೀಣ ಆಶ್ರಯ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿಧಿಸಬಹುದಾದ ನಿಯಮ ಮತ್ತು ಷರತ್ತುಗಳನ್ನು ತಪ್ಪದೇ ಪಾಲಿಸಬೇಕು. |
| 7. | ಮನೆ ನಿರ್ಮಾಣ ಮಾಡುವ ಕ್ರಮ:<br>1. ಸ್ವಂತಃ ಫಲಾನುಭವಿಗಳಿಂದ:<br><br>2. ಏಜೆನ್ಸಿ ಮೂಲಕ: | 1. ಫಲಾನುಭವಿಯೇ ತನ್ನ ಸ್ವಂತ ಮನೆಯನ್ನು ಸ್ಥಳೀಯವಾಗಿ ಅನುಮೋದಿತ ನಕ್ಷೆಗನುಗುಣವಾಗಿ ಕಟ್ಟಿಕೊಳ್ಳಬಹುದು (ಇದಕ್ಕಾಗಿ ಕಾಮಗಾರಿ ಆದೇಶ ಹೊರಡಿಸಿ ನಿಗದಿತ ಕಂತುಗಳಲ್ಲಿ ಹಣವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆ ಮೂಲಕ ನೀಡಲಾಗುವುದು. ) ಅಥವಾ<br>2. ಫಲಾನುಭವಿಯು ಇಚ್ಛಿಸಿದಲ್ಲಿ, ನಿಗಮವು ನೇಮಿಸುವ ಯಾವುದಾದರೊಂದು ಸಂಸ್ಥೆಯ ಮೂಲಕ ಮನೆ ಕಟ್ಟಿಸಿಕೊಡಲಾಗುವುದು. (ನಿರ್ಮಿತಿ ಕೇಂದ್ರ, ಭೂಸೇನಾ ನಿಗಮ, ಜಿಲ್ಲಾ ಪಂಚಾಯಿತಿ, ತಾಂತ್ರಿಕ ವಿಭಾಗ, ಸರ್ಕಾರೇತರ ಸಂಸ್ಥೆ ಇತ್ಯಾದಿ) |
| 8. | ಇತರೆ ವಿಷಯಗಳು : | ಫಲಾನುಭವಿಗಳು 15 ವರ್ಷ ತುಂಬುವ ಮೊದಲು ಮನೆಯನ್ನು ಪರಭಾರೆ ಮಾಡಲು ಯತ್ನಿಸಿದಲ್ಲಿ ಅಂತಹವರ ಮನೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ ಹಾಗೂ ಅಂತಹ ಮನೆಯನ್ನು ಇತರೆ ಅರ್ಹ ಫಲಾನುಭವಿಗೆ ಹಂಚಿಕೆ ಮಾಡಲಾಗುವುದು ಅಥವಾ ವಿಲೇವಾರಿ ಮಾಡಿ ಹಣವನ್ನು ವಾಪಸ್ಸು ಪಡೆಯಲಾಗುವುದು. |

ವಿ.ಸೂ : ಚೆಕ್ ಲಿಸ್ಟ್ : (ಒದಗಿಸಬೇಕಾದ ದಾಖಲೆಗಳು - ಸಂಕ್ಷಿಪ್ತ)

**ಫಲಾನುಭವಿಯಿಂದ :**

1. ವಸತಿಗಾಗಿ ನಿಗದಿತ ಅರ್ಜಿ (ನಮೂನೆ-1).
2. ನಿಗಮದೊಂದಿಗೆ ಸಾಲ ಪಡೆಯಲು/ಮರುಪಾವತಿ ಮಾಡಲು ಕರಾರು ಪತ್ರ (ನಮೂನೆ - 2ಎ)
3. ನಿವೇಶನ/ಮನೆಯನ್ನು ಸಾಲ ತೀರುವವರೆಗೂ ನಿಗಮದ ಪರವಾಗಿ ಅಡಮಾನ ಪತ್ರ ಬರೆದುಕೊಡಬೇಕು (ನಮೂನೆ-3ಎ)

**ಸಂಬಂಧಿಸಿದ ಗ್ರಾಮ ಪಂಚಾಯಿತಿ/ಕಾರ್ಯನಿರ್ವಹಣಾಧಿಕಾರಿ/ಜಿಲ್ಲಾ ಪಂಚಾಯತ್‌ನ ಮು.ಕಾ.ನಿ. ರಿಂದ :**

1. ಗ್ರಾಮ ಪಂಚಾಯಿತಿ / ಇಲಾಖೆ ಯೋಜನೆಯ ಅಡಿಯಲ್ಲಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಖಾತರಿಪಡಿಸಿಕೊಂಡ ಬಗ್ಗೆ ದೃಢೀಕರಣ ಪತ್ರ
2. ಅವಧಿಗೆ ಮುನ್ನ ಮನೆಯನ್ನು ಪರಭಾರೆ ಮಾಡದೆ ಇರುವ ಬಗ್ಗೆ ಫಲಾನುಭವಿಗಳಿಗೆ ಮನವರಿಕೆ ಹಾಗೂ ವ್ಯವಸ್ಥೆ ಮಾಡಿರುವ ಬಗ್ಗೆ ದೃಢೀಕರಣ ಪತ್ರ.
3. ನಿಗದಿಪಡಿಸಿದ ನಮೂನೆಗಳಲ್ಲಿ ಪ್ರತಿ ತಿಂಗಳು / ವರ್ಷ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಗತಿ ವರದಿಗಳನ್ನು ತಪ್ಪದೇ ಸಲ್ಲಿಸಬೇಕು.
4. ವಸತಿ ಯೋಜನೆಯ ಯಶಸ್ವಿ ಅನುಷ್ಠಾನದ ಬಗ್ಗೆ ಸಂಬಂಧಿಸಿದ ಇತರೆ ಮಾಹಿತಿ ಇತ್ಯಾದಿ.

**ಹೆಚ್ಚಿನ ವಿವರಗಳಿಗೆ ಈ ಕೆಳಕಂಡವರನ್ನು ಸಂಪರ್ಕಿಸಿ:**

1. ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ನಂ. 1,2,3,4,ಐ.ಟಿ.ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು - 560 044.(ದೂರವಾಣಿ 23118888 ಫ್ಯಾಕ್ಸ್ 23145085)
   ಈ-ಮೇಲ್ rgrhcl@rediffmail.com , ವೆಬ್‌ಸೈಟ್ : http://ashraya.kar.nic.in
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಜಿಲ್ಲಾಧಿಕಾರಿಗಳು, ಆಯಾಯ ಸಂಬಂಧಿಸಿದ ಜಿಲ್ಲೆಗಳು
3. ಸಂಬಂಧಪಟ್ಟ ತಾಲ್ಲೂಕು ಪಂಚಾಯತಿಯ ಕಾಯಾನಿರ್ವಹಣಾಧಿಕಾರಿಗಳು.
4. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು.

**********